ಆ. ಬೇವಿನಹಳ್ಳಿ, ಮಹದೇವಪುರ, ಟಿ.ಎಂ. ಹೊಸೂರುಗಳಲ್ಲಿ ಹೊಸದಾಗಿ ಪ್ರೌಢಶಾಲೆ ಪ್ರಾರಂಭವಾಗಿರುವುದಿಲ್ಲ. ಮಹದೇವಪುರ ಗ್ರಾಮದಲ್ಲಿ ಪ್ರೌಢ ಶಾಲೆಯನ್ನು ಹೊಸದಾಗಿ ಪ್ರಾರಂಭಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಇ. ಈ ತಾಲ್ಲೂಕಿಗೆ 616 ಶಿಕ್ಷಕರ ಹುದ್ದೆ ಮಂಜೂರಾಗಿರುತ್ತದೆ. ಇದರಲ್ಲಿ 580 ಮಂದಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುತ್ತಾರೆ. ಉಳಿದ 36 ಹುದ್ದೆಗಳು ಖಾಲಿ ಇರುತ್ತದೆ. ನೇಮಕಾತಿ: ಬಡ್ತಿ : ವರ್ಗಾವಣೆ ಮೂಲಕ ಸದರಿ ಖಾಲಿ ಹುದ್ದೆಗಳನ್ನು ಆದ್ಯತೆ ಮೇಲೆ ಭರ್ತಿ ಮಾಡಲಾಗುವುದು.

ರಾಜ್ಯದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಸ್ವಂತ ಕಟ್ಟಡ ನಿರ್ಮಾಣ

1512(2078) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತಿಕೋಟ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದಲ್ಲಿ ಇರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳೆಷ್ಟು; (ಜಿಲ್ಲಾವಾರು ಪಟ್ಟಿ ಒದಗಿಸುವುದು)

ಆ. ರಾಜ್ಯದ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿವೆ; ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ.

ಇ. ಬಿಜಾಪುರ ಜಿಲ್ಲೆಯಲ್ಲಿ ಇರುವಂತಹ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಎಷ್ಟು ಕೇಂದ್ರಗಳು ಸ್ವಂತ ಕಟ್ಟಡ ಹೊಂದಿವೆ; ಎಷ್ಟು ಕೇಂದ್ರಗಳಿಗೆ ಸ್ವಂತ ಕಟ್ಟಡ ಇರುವುದಿಲ್ಲ; (ತಾಲ್ಲೂಕುವಾರು ಪಟ್ಟಿ ನೀಡುವುದು)

ಈ. ಹಾಗಿದ್ದರೆ ಕಟ್ಟಡಗಳನ್ನು ನಿರ್ಮಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ. ಈ ಬಗ್ಗೆ ನಿರ್ದಿಷ್ಟಪಡಿಸಲಾದ ಕಾಲಮಿತಿ ತಿಳಿಸಬಲ್ಲಿರಾ?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ. ರಾಜ್ಯದಲ್ಲಿ ಒಟ್ಟು 1676 ಪ್ರಾಥಮಿಕ ಆರೋಗ್ಯ ಕೇಂದ್ರಗಳಿವೆ. (ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ) ಅನುಬಂಧ- 1

ಆ. ರಾಜ್ಯದಲ್ಲಿ 1167 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿದೆ. 510 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸ್ವಂತ ಕಟ್ಟಡ ಹೊಂದಿರುವುದಿಲ್ಲ.

ಇ. ಬಿಜಾಪುರ ಜಿಲ್ಲೆಯಲ್ಲಿ ಸ್ವಂತ ಕಟ್ಟಡ ಹೊಂದಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು - 46

ಸ್ವಂತ ಕಟ್ಟಡ ಹೊಂದದೇ ಇರುವ ಪ್ರಾ. ಆ.ಕೇಂದ್ರಗಳು -11

(ತಾಲ್ಲೂಕುವಾರು ಪಟ್ಟಿ ಲಗತ್ತಿಸಿದೆ) ಅನುಬಂಧ -11

ಈ. ನಬಾರ್ಡ್ ನೆರವಿನ ಆರ್.ಐ.ಡಿ. ಎಫ್ ಯೋಜನೆಯಡಿಯಲ್ಲಿ ಬಿಜಾಪುರ ಜಿಲ್ಲೆಯ ಈ ಕೆಳಕಂಡ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ನಿರ್ಮಾಣ ಮಾಡಲು ಸರ್ಕಾರ ಉದ್ದೇಶಿಸಿದೆ.

1. ಹೊನಗನಹಳ್ಳಿ - ಬಿಜಾಪುರ ತಾ.

2. ಕಂಬಾಗಿ - ಬಿಜಾಪುರ ತಾ.

3. ರೋಣ - ಇಂಡಿ ತಾ.

4. ಲಚ್ಯಾಣ - ಇಂಡಿ ತಾ.

5. ಕಾಂಗನೂರು - ಮುದ್ದೇಬಿಹಾಳ ತಾ.

6. ಭಂಟನೂರು - ಮುದ್ದೇಬಿಹಾಳ ತಾ.

7. ಗೋಲಗೇರಿ - ಸಿಂದಗಿ ತಾ.

ಉಳಿದ ಕೇಂದ್ರಗಳ ನಿರ್ಮಾಣಕ್ಕೆ ಮುಂಬರುವ ಸಾಲುಗಳಲ್ಲಿ ಹಂತ ಹಂತವಾಗಿ ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಅನುದಾನ ಒದಗಿಸಿಕೊಂಡು ಕಟ್ಟಡಗಳ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಸೂಚಿಸಲಾಗುವುದು.

ಉ. ಆರ್.ಐ.ಡಿ.ಎಫ್ ಯೋಜನೆಯು ಪ್ರಾರಂಭಿಸಿದ 2 ವರ್ಷದ ಅವಧಿಯಾಗಿದ್ದು 2005 ರ ಕೊನೆಗೆ ಪೂರ್ಣಗೊಳ್ಳಲಿದೆ.

ANNEXURE

STATEMENT SHOWING THE DISTRICT PRIMARY HEALTH CENTRE

Sl.No.	Name of the District	No. of PHC's
1	Bangalore (U) Dist	31
2	Bangalore (R) Dist	73
3	Mysore Dist	106
4	Mandya Dist	71
5	Hassan Dist	81
6	Tumkur Dist	97
7	Kolar Dist	82
8	Shimoga Dist	57
9	Chitradurga Dist	57
10	Chickmagalore Dist	51
11	Kodagu Dist	29
12	Mangalore (DK)	64
13	Raichur Dist	38
14	Bidar Dist	11
15	Dharwad Dist	28
16	Bijapur Dist	65

Sl.No.	Name of the District	No. of PHC's
17	Karwar Dist	61
18	Belgaum Dist	135
19	Bellary Dist	54
20	Gulbarga Dist	105
21	Chamarajanagar Dist	43
22	Udupi Dist	63
23	Dharvangere Dist	67
24	Koppal Dist	52
25	Gadag Dist	30
26	Haveri Dist	50
27	Bagalkote Dist	45
	TOTAL	**1676**

ವಿಧಾನ ಸಭಾ ಪ್ರಶ್ನೆ ಸಂಖ್ಯೆ 2078ರ ಅನುಬಂಧ - 11

ಕ್ರಮ ಸಂಖ್ಯೆ	ಜಿಲ್ಲೆ	ತಾಲ್ಲೂಕು	ಕಟ್ಟಡ ಹೊಂದಿರುವ ಪ್ರಾ.ಆ.ಕೇ.ಗಳ ಸಂಖ್ಯೆ	ಕಟ್ಟಡ ಹೊಂದದೆ ಇರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸಂಖ್ಯೆ
1	ವಿಜಾಪುರ	ಬಸವನಬಾಗೇವಾಡಿ	12	2
2	"	ವಿಜಾಪುರ	10	1
3	"	ಮುದ್ದೇಬಿಹಾಳ	7	3
4	"	ಹಿಂಡಿ	8	3
5	"	ಸಿಂದಗಿ	9	2
		ಒಟ್ಟು	**46**	**11**

ಬಿಜಾಪುರ ತಾಲ್ಲೂಕು ಅರ್ಜುಣಗಿ ಸರ್ಕಾರಿ ಪ್ರೌಢಶಾಲೆಯಲ್ಲಿ ಇಂಗೀಷ್ ಹಾಗೂ ಹಿಂದಿ ಶಿಕ್ಷಕರ ಹುದ್ದೆ

1513 (2079) ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮಗೌಡ (ತೀಕೊಟ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?